Regd No M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 93] ಸೋಮವಾರ 9—2—48 [ಬಿಡಿ ಪ್ರತಿ 3 ಪೈ

ಸರ್ವಜನಕಲ್ಯಾಣಕ್ಕಾಗಿ, ಭಾರತದ
ಸ್ವಾತಂತ್ರ್ಯಕ್ಕಾಗಿ, ಪ್ರಪಂಚದ
ಶಾಂತಿಗಾಗಿ ತಪಸ್ಸು ಮಾಡಿದ

ಸ್ಥಿತಪ್ರಜ್ಞ ಗಾಂಧೀಜಿ

ನಮ್ಮನ್ನಗಲಿದ 11 ನೆ ದಿನ

ಮ ಹಾ ತ್ಮ ರಿ ಗೆ
ಶ್ರ ದ್ಧಾಂ ಜ ಲಿ

ಅಗಲಿ ಪೋದೆಯಾ ।
ಮಹಾತ್ಮಾ ಅಗಲಿ ಪೋದೆಯಾ ॥

೧

ಭಾರತ ದಿವ್ಯ ಜ್ಯೋತಿ
ಧಾರುಣಿಯ ದಿವ್ಯ ಶಾಂತಿ
ಸಾರಸತ್ವದಮಲ ಮೂರ್ತಿ
ಚಾರುಚರಿತ ದಿವ್ಯ ಶಕ್ತಿ

೨

ಅರಿ ವರ್ಗದ ಕಷ್ಟಸಹಿಸಿ
ಹಿರಿಯ ಶಾಂತಿ ದೂತನೆನಿಸಿ
ದುರುಳ ವೈರಿಮನವ ಜಯಿಸಿ
ವರಮಾತೆಯನುದ್ಧರಿಸಿ

೩

ಭಾರತ ಸ್ವಾತಂತ್ರ್ಯ ಜನಕ
ಧೀರ, ಶಾಂತಿ ಸಮರ ನಾಯಕ
ತೋರಿದ ಸನ್ಮಾರ್ಗ ಶಿಕ್ಷಕ
ಚಾಯಿವದನ ಮನಮೋಹಕ

೪

ಅಮರವಾದ ಆತ್ಮಜ್ಯೋತಿ
ಅಮ ಲೋಕದಿಂದ ಸ್ಫೂರ್ತಿ
ವಿಮಲಶಾಂತಿ ಸಮರ ನೀತಿ
ನಮಗೆ ಬೀರುತಿರಲಿ ನಿತ್ಯ

೫

ದೀನ ಸುತರ ಶ್ರದ್ಧಾಂಜಲಿ
ಮಾನ್ಯ ಪಿತನೆ ಕರುಣದಲಿ
ಮೌನದಿ ಸ್ವೀಕರಿಸುತಲಿ
ಜ್ಞಾನ ನೆಲಿಸು ಹೃದಯದಲಿ [ಸಂ]

ಮೈಸೂರು—ಪೌರಸಭಾ ವಿಶೇಷ ಮೀಟಿಂಗು 16 ನೇ ತಾರೀಖು ಮಧ್ಯಾಹ್ನ 4 ಗಂಟೆಗೆ ನಡೆಯುವುದು.

ಸು ದ್ದಿ ಗ ಳು

ಮೈಸೂರು— ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಕೆಲಸಗಾರರು ಮಿಲ್ ಲೇಬರ್ ಕಾಲನಿಯಲ್ಲಿನ ರಾಮಚಂದ್ರ ಪಾರ್ಕಿನಲ್ಲಿ ಜನರಲ್ ಮ್ಯಾನೇಜರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಸೌಹಾರ್ದ, ಸತ್ಯ, ಪ್ರೇಮ, ಅಹಿಂಸಾ ಮೂರ್ತಿಯೂ ಶಾಂತಿ ದೂತನೂ, ಪೂರ್ಣ ಜೀವನವನ್ನೇ ಹಿಂದುಳಿದವರ್ಗ ಮತ್ತು ಬಡವರ ಅಭ್ಯುದಯಕ್ಕೆ ಸಮರ್ಪಿಸಿದಾತನೂ ಆದ ಮಹಾತ್ಮಾ ಗಾಂಧೀಜಿಯವರ ನಿಧನದ ಬಗ್ಗೆ ಸಂತಾಪ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು.

ಂ ಂ

ಮೈಸೂರು— ಶುಕ್ರವಾರ ಪ್ರಥಮತಃ ಖಾಸಗಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಪೌರಸಭೆಯಲ್ಲಿ ಗಾಂಧೀಜೀ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು—ಅಧ್ಯಕ್ಷರಿಗೆ ಮಾಸಿಕಭತ್ತ ರೂ. 200 ಅಲೊಯನ್ಸು ಮತ್ತು ಒಂದು ವೋಟಾರ್ಕಾರು ಕೊಡಲು ನಿರ್ಣಯಿಸಲಾಯಿತು.

ವು ಡ್ ಲ್ಯಾಂ ಡ್ಸ್

ಕೇರ್ತಿದಾಯಕ 4 ನೆ ವಾರ

DIN-RAAT

ಸ್ನೇಹಪ್ರಭಾ
ಸುರೇಶ್ ಬ್ಯಾನರ್ಜಿ
ಪಾತ್ರವಹಿಸಿರುವ

ದಿನ್-ರಾತ್

(ಅಮೋಘ ಹಿಂದೀ ಚಿತ್ರ)

— Karnataka Films Release —

Edited, Printed and Publishd by M S Krishna Rao at the Satyavadi Press, Chamaraja Agahar Myrsore

ಮುಸ್ಲಿಂ ನ್ಯಾಷನಲ್ ಗಾರ್ಡ್ ಶಾಸನಬಾಹಿರ ಸಂಸ್ಥೆ

ಮುಸ್ಲಿಂ ಲೀಗು ನ್ಯಾಷನಲ್ ಗಾರ್ಡ್ ಸಂಸ್ಥೆಯನ್ನು ಗೌರ್ನರ್ ಮತ್ತು ಚೀಫ್ ಕಮಿಷನರ್ ಪ್ರಾಂತ್ಯಗಳಲ್ಲಿ ಅಕ್ರಮುಕೂಟ ಎಂದು ಭಾರತ ಸರಕಾರ ಸಾರಿದೆ.

ಸನದೆಹಲಿ — ಡೆಲ್ಲಿಯ ಮುಸ್ಲಿಂರು ಗಾಂಧೀಜಿ ಬೂದಿಯನ್ನು ಜುಮ್ಮಾ ಮಸೀದಿ ಎದುರಿಗಿರುವ, ಬಿಂಗಜೇಬಿನ ಕಾಲದ ಪ್ರಸಿದ್ಧ ಸಾಧು 'ಹಾಂತಾಬಾರಾ ವಿನ ಗೋರಿಯ ಹತ್ತಿರ ಹೂಳಲು ನಿರ್ಧರಿಸಿರುವರು.

ಂ ಂ

ಬೆಂಗಳೂರು ಫೆ 7— ಭಾರತ ಡೊಮಿನಿಯನ್ನಿನಲ್ಲಿ ಪ್ರಕಟಿಸಿರುವಂತೆ ತಾ॥ 12 ಗಾಂಧೀಜೀ ಜ್ಞಾಪಕಾರ್ಥವಾಗಿ ಶೋಕದಿನವಾಗಿ ಭಾವಿಸಲ್ಪಡುವದೆಂದು ಮೈಸೂರು ಸರಕಾರ ಘೋಷಿಸಿದೆ. ಮತ್ತು ಆ ದಿನ ಸರಕಾರಿ ರಜಾದಿನವಾಗಿದ್ದು ಸಂಸ್ಥಾನಾವಳಿ ಮೆರವಣಿಗೆ ಮತ್ತು ಸಭೆಗಳನ್ನು ನಡೆಸಬೇಕೆಂದೂ ಕೋರಲಾಗಿದೆ.

ಂ ಂ

ಮೈಸೂರು— ಜೋಗ್ ಹೈಡ್ರೊ ಎಲೆಕ್ಟ್ರಿಕ್ ವರ್ಕ್ಸ್‌ಗೆ ಗಾಂಧೀಜೀಯವರ ಹೆಸರಿಡಲಾಗುವುದೆಂದು ತಿಳಿಯಬಂದಿದೆ.

At Opera

ಯಶಸ್ವಿ 2 ನೇ ವಾರ

ಕಸ್ತೂಂ ಬಾ, ಚಿನ್ನಪ್ಪ
ಕೃಷ್ಣ, ಮಧುರಂ
ಪಾತ್ರವಹಿಸಿರುವ

ಕನಗಿ

(ತಮಿಳು)

ಗಾಂಧೀಜೀ ಜೀವನದ ರಸಮಯ ಸನ್ನಿವೇಶಗಳು

ಇಂಗ್ಲೆಂಡಿಗೆ ಗಾಂಧೀಜೀ ಹೋದಾಗ ಅಲ್ಲಿಯ ಪತ್ರಿಕೆಗಳು ಅವರನ್ನು ವಿಚಿತ್ರ ರೀತಿಯಲ್ಲಿ ವರ್ಣಿಸಿದವು. ಅವರ ವೈಶಾಲ್ಯ ಔದಾರ್ಯಗಳನ್ನು ಚಿತ್ರಿಸಿದರು. ಒಬ್ಬ ಪತ್ರಿಕೋದ್ಯೋಗಿ ಹದ್ದುಮೀರಿ ವರ್ಣಿಸಿ 'ಪ್ರಿನ್ಸ್ ಆಫ್ ವೇಲ್ಸ್' ಹಿಂದೂಸ್ಥಾನಕ್ಕೆ ಬಂದಾಗ ಗಾಂಧೀಜಿ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆಂದು ಬರೆದಿದ್ದ. ಗಾಂಧೀಜಿ ಆತನನ್ನು ಕರೆಸಿ ಹೇಳಿದರು — 'ಅಯ್ಯಾ ಕೆಡುಬಡವನಾದ ಬೀದಿ ಗುಡಿಸುವವನ ಮುಂದೆ, ಹೊಟೆಯ ಸಾಷ್ಟಾಂಗ ನಮಸ್ಕಾರಮಾಡಿಯೇನು; ಸಾವಿರಾರು ವರ್ಷ ಅವರನ್ನು ಕೆಳಗೆ ಹಾಕಿ ತುಳಿದಿದ್ದಕ್ಕೆ ಅವರ ಕ್ಷಮೆ ಬೇಡಬಲ್ಲೆ - ಅವರ ಪಾದಧೂಳಿಯನ್ನು ನನ್ನ ತಲೆಯ ಮೇಲೆ ಇಟ್ಟುಕೊಳ್ಳಬಲ್ಲೆ. ಆದರೆ 'ಪ್ರಿನ್ಸ್ ಆಫ್ ವೇಲ್ಸ್' ಅಲ್ಲ: ಚಕ್ರವರ್ತಿಯ ಮುಂದೆ ಕೂಡ ನಮಸ್ಕಾರ ಮಾಡಲಾರೆ.'

ಗಾಂಧೀಜೀ ಗುಣಗಾನ
ಧರ್ಮ ಸಮ್ಮೇಳನದಲ್ಲಿ

ಅಲಹಾಬಾದು ಫೆ 8— ಅಖಿಲ ಭಾರತ ಧರ್ಮ ಸಂಘದ ಏಳನೇ ವಾರ್ಷಿಕ ಸಮ್ಮೇಳನವು ಜಗದ್ಗುರು ಜ್ಯೋತಿಷ್ಪೀಠ ಥಾಡಿ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಶಾರದಾ ಪೀಠಾಧೀಶ ಶ್ರೀ ಜಗದ್ಗುರು ಶಂಕರಾಚಾರ್ಯರು ಸಮ್ಮೇಳನವನ್ನು ಪ್ರಾರಂಭಗೊಳಿಸುತ್ತಾ, ಆರ್ಯ ಸಂಸ್ಕೃತಿಯ ಸನಾತನಧರ್ಮದ ಪ್ರಾಮುಖ್ಯತೆಯನ್ನು ವಿವರಿಸಿದರು. ಸಮ್ಮೇಳನದ ಸ್ವಾಗತಾಧ್ಯಕ್ಷ ಬ್ರಹ್ಮಚಾರಿ ಪ್ರಭುದತ್ತಜೀಯವರ ಲಿಖಿತ ಭಾಷಣವು ಓದಲ್ಪಟ್ಟಿತು. ಅದರಲ್ಲಿ ಗಾಂಧೀಜೀಯವರ ಬಗ್ಗೆ ಅತ್ಯಂತ ಗೌರವಯುತ ಗುಣಗಾನ ಮಾಡಲಾಗಿತ್ತು. ಜಗದ್ಗುರು ಜ್ಯೋತಿಷ ಪೀಠಾಧೀಶ್ವರರನ್ನು ಅಧ್ಯಕ್ಷಪದಕ್ಕೆ ಮಹಾಮಹೋಪಾಧ್ಯಾಯ ಗಿರಿಧರ ಶಾಸ್ತ್ರಿಗಳಿಂದ ಸೂಚಿಸಲ್ಪಟ್ಟು, ಪಂಡಿತ ಅಖಿಲಾನಂದಜೀ, ಪಂ॥ ಮಾಧವಾಚಾರ್ಯಜೀ ಮತ್ತು ಪಂ॥ ತುಕಾರಾನಂದಜೀಯವರುಗಳಿಂದ ಅನುಮೋದಿಸಲ್ಪಟ್ಟ ನಿರ್ಣಯವು ಅಂಗೀಕೃತವಾಯಿತು. ಅಧ್ಯಕ್ಷ ಭಾಷಣವು ಶ್ರೀಮತ್ ಚಂದ್ರಶೇಖರ ಸ್ವಾಮಿಗಳಿಂದ ಪಠಿಸಲ್ಪಟ್ಟಿತು. ಕರಪಾತ್ರಜೀ ಸ್ವಾಮಿಗಳು ಸ್ಫೂರ್ತಿದಾಯಕ ಭಾಷಣ ಮಾಡಿದರು. ಅಧಿವೇಶನ ನಡೆಯುತ್ತಿದೆ.

ತಾ॥ 9-2-48 ॥ ಶ್ರೀ॥ ನಂ. 74

"ಪ್ರ ಬೋ ಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾಂತವಿಶಾರದ
ಸಂಘದ ಕಾರ್ಯದರ್ಶಿ. ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ದೇವಾಲಯ ಪ್ರವೇಶ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ದೇವಾಲಯ ಪ್ರವೇಶದಲ್ಲಿ ಅಧಿಕಾರ ವಿಲ್ಲದಿದ್ದಾಗ್ಯೂ ಅವರಿಗೆ ದೇವಾಲಯದ ಕಲಶದರ್ಶನದಿಂದಾಗುವ, ಸ್ಪೃಶ್ಯರಿಗೂ ಪ್ರವೇಶವಿಲ್ಲದ ದಿವ್ಯಪುಣ್ಯದಲ್ಲಿ ಅಧಿಕಾರವಿದೆ,

ಅಸ್ಪೃಶ್ಯರಿಗೆ ವೈದಿಕ ಸಂಸ್ಕಾರಗಳಲ್ಲಿ ಅಧಿಕಾರವಿಲ್ಲದುದರಿಂದ ಅವರ ಪರಲೋಕದ ಮಾರ್ಗವು ತಡೆಗಟ್ಟಿಲ್ಲ ಒಂದು ವೇಳೆ ಅವರು ಮಾರ್ಗಭ್ರಷ್ಟರಾಗುತ್ತಾರೆಂಬ ಕುತರ್ಕಕ್ಕೊಳಗಾಗಿ ಶಾಸ್ತ್ರವಿದ್ರೋಹವನ್ನು ಮಾಡದಿದ್ದಲ್ಲಿ ಸಂಸಾರ ಸಾಗರದಿಂದ ಪಾರಾಗುವುದರಲ್ಲಿ ಸಂದೇಹವೇ ಇಲ್ಲದಷ್ಟು ಅವರ ಪರಲೋಕದ ಹಾದಿಯು ಅಗಲವಾಗಿದೆ.

ಶೂದ್ರರ ಸಂತರ್ಪಣದಲ್ಲಿ ಅನರ್ಹತೆಯೆಂದರಿವುದರಿಂದ, ವೇದಗಳನ್ನು ವಿಭಾಗಿಸಿದ, ಅಷ್ಟಾದಶ ಪುರಾಣಗಳನ್ನು ರಚಿಸಿದ, ಭಾರತ ವಿಧಾತೃವೂ, ವಿಷ್ಣುವಿನ ಅವತಾರವೂ ಆದ ಸಾಕ್ಷಾತ್ ಭಗವಾನ್ ವ್ಯಾಸರು ' ಶೂದ್ರರು ಧನ್ಯರು, ಶೂದ್ರರು ಧನ್ಯರು ' ಎಂದು ಹೇಳಿರುವರು. ಸ್ಪೃಶ್ಯಾಸ್ಪೃಶ್ಯತೆಯಿಂದ ಅದರ-ಇನಾದಾಗಲಿಗೇನೂ ಸಮ್ಮಲ್ಲಿ ಸಂಬಂಧವಿಲ್ಲ. ಸಮಯಬಂದಾಗ ನಮ್ಮ ತಾಯಿ ಸೋದರಿಯರೂ ಅಸ್ಪೃಶ್ಯರಾಗಿರುತ್ತಾರೆ, ನಾವು ಸ್ವಯಂ ಅಸ್ಪೃಶ್ಯರಾಗುತ್ತೇವೆ, ನಮ್ಮ ಅಂಗಗಳಲ್ಲಿಯೇ ಅಸ್ಪೃಶ್ಯವಾದ ಅಂಗಗಳಿವೆ.

ಆದ್ದರಿಂದ ಅಸ್ಪೃಶ್ಯರ ದೇವಾಲಯ ಪ್ರವೇಶಕ್ಕೆ ನಾವು ವಿರುದ್ಧವಾಗಿರುವುದಾದರೆ, ಅವರ ಕಲ್ಯಾಣದ ಸಲುವಾಗಿ ಮತ್ತು ಶಾಸ್ತ್ರಗಳ ಮರ್ಯಾದಾಪಾಲನೆಗಾಗಿ ವಿರುದ್ಧರಾಗಿರುವೆವು. ಅವರ ಹಿತಕ್ಕೆ ವಿರುದ್ಧವಾಗಿಯೋ ಇರುವುದಿಲ್ಲ.

ಹಿಂದುತ್ವೇನ ಎಲ್ಲರೂ ಒಂದೇ ಆದಾಗ್ಯೂ ಎಲ್ಲರಿಗೂ ಎಲ್ಲದರಲ್ಲಿ ಅಧಿಕಾರ ವಿರುವುದಿಲ್ಲ. ಬಾರ್ಹಸ್ಪತ್ಯ ಯಾಗವನ್ನು ಬ್ರಾಹ್ಮಣರೇ ಮಾಡಬಹುದು, ಉಳಿದ ಮೂರು ವರ್ಣಗಳು ಮಾಡಲಾರವು ರಾಜಸೂಯವನ್ನು ಕ್ಷತ್ರಿಯರು ಮಾತ್ರ ಮಾಡಬಲ್ಲರು. ಬ್ರಾಹ್ಮಣ ವೈಶ್ಯಾದಿಗಳು ಮಾಡಲಾಗದು ವಾಸ್ತು ಮಖವನ್ನು ನಿಷಾದನು ಮಾತ್ರ ಮಾಡಬಹುದು. ಬ್ರಾಹ್ಮಣಾದಿಗಳು ಮಾಡಲಾರರು ತಮ್ಮತಮ್ಮ ಸ್ನಾನದಲ್ಲಿ ಎಲ್ಲರಿಗೂ ಮಹತ್ವವಿದೆ. ಎಲ್ಲರ ಉಪಯೋಗವಿದೆ, ಯಾವ ರೀತಿ ಬ್ರಾಹ್ಮಣನಿಗೆ ಅವನ ಬ್ರಾಹ್ಮಣ ಧರ್ಮದ ಗರ್ವವು ಉಚಿತವಾಗಿದೆಯೋ ಅದೇ ರೀತಿ ಶೂದ್ರನಿಗೆ ಅವನ ಧರ್ಮದ ಗರ್ವ ವಿರಬೇಕು. ನೋಡಿರಿ, ಗಾಂಧೀಜಿಯೂ ಸಹ ' ನಮಗೆ ನಾವು ಹಿಂದೂಗಳಾಗಿರುವೆವೆಂಬ ಗರ್ವವಿದೆ ' ಎಂದು ಹೇಳುತ್ತಾರೆ.

ತಾತ್ಪರ್ಯವೇನೆಂದರೆ— ಅಸ್ಪೃಶ್ಯ ಜಾತಿಯು ಹಿಂದುವಾಗಿದೆ. ಅವರಿಗೆ ತಾವು ಹಿಂದೂಗಳಾಗಿರುವೆವೆಂಬ ಗರ್ವ ವಿರಬೇಕು ; ಹಿಂದೂಶಾಸ್ತ್ರದ ವಚನವನ್ನು ಆದರಿಸಬೇಕು. ದೇವಾಲಯ ಪ್ರವೇಶದಲ್ಲಿ ಅವರಿಗೇನೂ ಲಾಭವಿಲ್ಲ, ಮತ್ತು ಶಾಸ್ತ್ರವು ಅಡ್ಡಿಪಡಿಸುತ್ತಿದ್ದರಿಂದ ದೇವಾಲಯ ಪ್ರವೇಶವನ್ನು ಮಾಡದಿರುವುದಲ್ಲಿಯೇ ಅವರ ಹಿಂದುತ್ವವಿದೆ. ಇತರರ ದೇವಾಲಯ ಪ್ರವೇಶಕ್ಕಿಂತ ನಮ್ಮ ಕಲಶದರ್ಶನವು ಎಷ್ಟೋ ಅಧಿಕವೆಂಬ ವಿಷಯದಲ್ಲವರಿಗೆ ಗರ್ವ ವಿರಬೇಕು.

ಧರ್ಮ ಸಮ್ಮೇಳನ

ಅಲಹಾಬಾದ್, ಫೆ 6 — ಶ್ರೀ ದ್ವಾರಕಾ ಪೀಠಾಧೀಶ್ವರ ಶ್ರೀ ಜಗದ್ಗುರು ಶಂಕರಾಚಾರ್ಯರು ಅಲಹಾಬಾದ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಇಲ್ಲಿಗೆ ನಿನ್ನೆ ಆಗಮಿಸಿದರು. ಧರ್ಮ ಸಂಘಗಳ ಕಾರ್ಯದರ್ಶಿಗಳಾದ ಶ್ರೀ ಸ್ವಾಮಿಜೀ ಕೇಶವಾಶ್ರಮ ಶಾಸ್ತ್ರಿ, ಮಾಯಾದ ಶ್ರೀಜೀ ಮತ್ತಿತರರುಗಳಿಂದ ಹೃತ್ಪೂರ್ವಕ ಸ್ವಾಗತ ದೊರೆಯಿತು. ಅಲಹಾಬಾದ್ ವಿಶ್ವವಿದ್ಯಾನಿಲಯ ಸಂಸ್ಕೃತ ಪ್ರೊಫೆಸರ್ ಆದ ಶ್ರೀಯುತ ಪ್ರಸನ್ನ ಕುಮಾರ ಆಚಾರ್ಯರವರ ಬರಮಾಗಲಿಗೆ ಕಾರಿನಲ್ಲಿ ಮೆರವಣಿಗೆಯಿಂದ ಶ್ರೀ ಜಗದ್ಗುರುಗಳನ್ನು ಕರೆದುಕೊಂಡು ಹೋಗಲಾಯಿತು. ಸ್ನಾನ, ಪ್ರಾರ್ಥನೆ ಭೋಜನೇತ್ಯಾದಿಗಳು ಆದ ತರುವಾಯ ಸನ್ಯಾಸಿಗಳ ಮತ್ತು ಧರ್ಮಸಂಘ ಸ್ವಯಂ ಸೇವಕರುಗಳ ಪ್ರದೇಶ ಗಾತ್ರುಗಟ್ಟಿಯಲ್ಲಿ ಶ್ರೀ ಜಗದ್ಗುರುಗಳಿಗಾಗಿ ವಿಶೇಷ ನಿರ್ಮಾಣಮಾಡಿದ ಧರ್ಮಸಂಘ ಶಿಬಿರಕ್ಕೆ ಮೆರವಣಿಗೆಯಿಂದ ಕರೆದುಕೊಂಡುಹೋದರು. ಶ್ರೀ ಜಗದ್ಗುರುಗಳ ಗೌರವಾರ್ಥ ಸರ್ಕಾರದ ವಾದ ಮತ್ತು ಸರ್ವಾರ್ ಪೋಲೀಸರು ಮೆರವಣಿಗೆಯೊಡನೆ ತೆರಳಿದರು. ಪ್ರಮುಖ ರಸ್ತೆಗಳಲ್ಲಿ ' ಧರ್ಮಾಕಿ ಜೈ ' ಎಂಬ ಘೋಷಣೆಗಳೊಡನೆ ಮೆರವಣಿಗೆ ಮುಂದುವರಿಯಿತು. ಮಧ್ಯಾಹ್ನ ಶ್ರೀ ಜಗದ್ಗುರುಗಳು ಸನ್ಯಾಸಿಗಳ ಸಭೆಯಲ್ಲಿ ಸನ್ಯಾಸಿಗಳ ಕರ್ತವ್ಯ ಮತ್ತು ಕಾರ್ಯಗಳ ಮೇಲೆ ಹೃದಯಂಗಮ ಭಾಷಣ ಮಾಡುತ್ತಾ ಸನ್ಯಾಸಿಗಳ ತರಬೇತು ಶಾಲೆಯು ಅಗತ್ಯದ ಬಗ್ಗೆ ಒತ್ತಿ ಹೇಳಿದರು.

ಶ್ರೀ ಜಗದ್ಗುರು ಜ್ಯೋಷ ಬದ್ರಿಶ್ವರರು ಅಧ್ಯಕ್ಷ ಭಾಷಣದಲ್ಲಿ ಶ್ರೀ ಜಗದ್ಗುರುಗಳ ಅಭಿಪ್ರಾಯಗಳನ್ನು ಪುಷ್ಟೀಕರಿಸಿದರು.

ಸ್ವಾಮಿಜಿ ಕರಪಾತ್ರೀಜಿಯವರು ಆಚಾರ್ಯರುಗಳಿಗೆ ಅಭಿನಂದಿಸಿ ಸಮ್ಮೇಳನವನ್ನು ಮುಕ್ತಾಯಗೊಳಿಸುತ್ತಾ, ಧರ್ಮಿಕತೆಯನ್ನು ಎಚ್ಚರಿಸಬೇಕೆಂದು ಸಭಿಕರಲ್ಲಿ ವಿನಂತಿ ಮಾಡಿಕೊಂಡರು.

ಈ ದಿವಸ ಸಾಧು ಸಮ್ಮೇಳನ ಸೇರುವುದು.

ಅಲಹಾಬಾದ್, ಫೆ 7 — ಶ್ರೀ ದ್ವಾರಕಾಪೀಠಾಧೀಶ್ವರ ಶ್ರೀ ಜಗದ್ಗುರು ಶಂಕರಾಚಾರ್ಯರು ಸಮಾರು ಮುನ್ನೂರು ಮಂದಿ ಸನ್ಯಾಸಿಗಳ ಸಂಗಡ ಧಾರ್ಮಿಕ ಸಂಪ್ರದಾಯಗಳಿಗನುಸಾರವಾಗಿ ಏಕಾದಶಿ ಸ್ನಾನವನ್ನು ತ್ರಿವೇಣಿ ಸಂಗಮದಲ್ಲಿ ಸ್ವೀಕರಿಸಿದರು.

ಅಖಿಲ ಭಾರತ ಸಾಧುಗಳ ಸಮ್ಮೇಳನ ಶ್ರೀ ಜಗದ್ಗುರು ಶಾರದಪೀಠಾಧೀಶರ ಅಧ್ಯಕ್ಷತೆಯಲ್ಲಿ ಸೇರಿತು. ಅಖಿಲ ಸಂಪ್ರದಾಯಗಳ ಮಹಾತ್ಮರುಗಳು ಸುಮಾರು ನಾಲ್ಕುಸಾವಿರ ಮಂದಿ ಅಧಿವೇಶನದಲ್ಲಿ ಸಮಾವೇಶಗೊಂಡಿದ್ದರು.

ಮಹಾತ್ಮ ಗಾಂಧೀಜಿಯವರ ಸಿದ್ಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಮಹಾರಥಿ ಮಾಧವಾಚಾರ್ಯಜೀಯವರು ಮಂಡಿಸಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಗವರ್ನರರು ಧಾರ್ಮಿಕ ವಿಷಯಗಳಲ್ಲಿ ಪ್ರವೇಶಿಸಕೂಡದು ಎಂಬ ನಿರ್ಣಯವನ್ನು ಅಧ್ಯಕ್ಷರು ಸಭೆಯ ಮುಂದೆ ಇಟ್ಟರು

ಶ್ರೀ ಕರಪಾತ್ರೀಜಿ ಮತ್ತಿತರರು ಸ್ಫೂರ್ತಿದಾಯಕ ಭಾಷಣ ಮಾಡಿದರು.

ನಿರ್ಣಯ ಸರ್ವಾನುಮತದಿಂದ ಅಂಗೀಕೃತವಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಚಾರ್ಯರುಗಳ ಆಜ್ಞೆಯಂತೆ ನಡೆಯುವೆಂದು ತಿಳಿಸಿದರು

' ಧರ್ಮಾಕಿ ಜೈ ' ಘೋಷಣೆಯೊಡನೆ ಸಮ್ಮೇಳನ ಮುಗಿಯಿತು.

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರ ಆಫೀಸಿನಿಂದಾ

ಪ್ರ ಕ ಟ ಣೆ

ಪೌರಸಭಾಧ್ಯಕ್ಷರು ವಾಣೀವಿಲಾಸ ವಾಟರ್‌ವರ್ಕ್ಸ್ ಸೂಪರಿಂಟೆಂಡೆಂಟರೊಡನೆ ಮಾತನಾಡಿ, ಮಹಾತ್ಮಾಜೀಯವರ ಕಡೆಯ ಕರ್ಮಾಂತರ್ದಿನಗಳು ಅಂದರೆ 9 ರೀತಿಗಾಯ್ತು 15ನೇ ತಾರೀಖುಗಳಲ್ಲಿ ಮೈಸೂರಿನಲ್ಲಿ 24 ಗಂಟೆಗಳ ಕಾಲವೂ ಕೈಲಾಸವಟ್ಟಿಗೆ ನೀರನ್ನು ಸಂಪರಾಜು ಮಾಡಲು ಏರ್ಪಡಿಸಿರುತ್ತಾರೆ ಆ ದಿವಸ ಅನ್ನದಾನಾದಿಗಳನ್ನು ಮಾಡತಕ್ಕ ಸಂದರ್ಭಗಳಲ್ಲಿ ಅನಾನುಕೂಲ ಸಂಭವಿಸದೇ ಇರಲು ಈ ಏರ್ಪಾಡು ಮಾಡಿರುತ್ತೆ.

(ಸಹಿ) ಷಿ. ಸೀತಾರಾಮಯ್ಯ
ತಾ॥ 9—2—1948 ಪ್ರೆಸಿಡೆಂಟ್,
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು